**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 21/2022 ಸಿ.ಡಬ್ಲ್ಯೂ–13 ಪಿ.ಡಬ್ಲ್ಯೂ–9

| | | |
|---|---|---|
| ಹೆಸರು | ಃ | ವಾತ್ಸಲ್ಯ |
| ತಂದೆಃಗಂಡ | ಃ | ಸಂಗಣ್ಣಾ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | : | ಪಿ.ಎಸ್.ಐ, ರೆವೂರ |
| ವಾಸಸ್ಥಳ | ಃ | ರೆವೂರ |

ದಿನಾಂಕಃ 24.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ**

ನಾನು ದಿಃ 24-09-2021 ರಿಂದ ದಿಃ 30-07-2023 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 24-09-2021 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ದಿಃ 18-01-2022ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದೇ ದಿನ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 8 ಅಂತ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 8 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಮ ವಿ ಇ ವಕೀಲರಿಂದಃ**

ಸಾಮಾನ್ಯವಾಗಿ ಯಾವ ವೈದ್ಯರು ಚಿಕಿತ್ಸೆ ನೀಡಿರುತ್ತಾರೋ ಅವರೇ ಗಾಯದ ಪ್ರಮಾ ಣಪತ್ರ ನೀಡಬೇಕು ಎಂದರೆ ಸರಿ. ನಿಪಿ. 7 ರಲ್ಲಿ ದಿಃ 30-06-2021 ರಿಂದ 05-07-2021 ವರೆಗೆ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇದ್ದು, ಸದರಿ ವೇಳೆಯ ಗಾಯದ ಪ್ರಮಾ ಣಪತ್ರವನ್ನು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿಯು ಹಿಂದಿನ ತನಿಖಾಧಿಕಾರಿಗಳು ಪಡೆದುಕೊಂಡಿರುತ್ತಾರೆ ಅಂತಾ ನುಡಿಯುತ್ತಾರೆ. ನಾನು ಸದರಿ ದಾಖಲೆಯನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುತ್ತೇನೆ. ನಿಪಿ. 7 ಎಕ್ಸರೆಗೆ ಸಂಬಂದಿಸಿದ

ವರದಿ ಇರುತ್ತದೆ. ದಿಃ 30-06-2021 ರಿಂದ 05-07-2021 ವರೆಗೆ ಚಿಕಿತ್ಸೆ ಪಡೆದ ಬಗ್ಗೆ ಗಾಯದ ಪ್ರಮಾಣ ಪತ್ರವು ಅಂತಿಮ ವರದಿಯೊಂದಿಗೆ ಇಲ್ಲ ಎಂದರೆ ಸಾಕ್ಷಿಯ ವೈದ್ಯರು ಏ ,ನು ದಾಖಲೆ ನೀಡಿರುತ್ತಾರೋ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ಸಮಯದಲ್ಲಿ ಡಾಃ ಶಾಂತೇಶ ಪಾಟೀಲರವರು ಚಿಕಿತ್ಸೆ ನೀಡಿರುತ್ತಾರೆ. ದಿಃ 30-06-2021 ರಿಂದ 05-07-2021 ವರೆಗೆ ಚಿಕಿತ್ಸೆ ಪಡೆದ ಗಾಯದ ಪ್ರಮಾಣ ಪತ್ರ ಇಲ್ಲ ಅಂತಾ ನನಗೆ ಅಂತಿಮ ವರದಿ ಸಲ್ಲಿಸುವ ಸಮಯದಲ್ಲಿ ತಿಳಿದು ಬಂದಿತ್ತು ಎಂದರೆ ಸರಿಯಲ್ಲ. ನಾನು ದಿಃ 24-09-2021 ರಿಂದ ದಿಃ 30-07-2023 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 24-09-2021 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ದಿಃ 18-01-2022ರಂದು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದೇ ದಿನ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ.ನಂಃ 21/2022 ಸಿ.ಡಬ್ಲ್ಯೂ–12 ಪಿ.ಡಬ್ಲ್ಯೂ–8

| | | |
|---|---|---|
| ಹೆಸರು | ಃ | ಉದ್ಗಂಡಪ್ಪಾ |
| ತಂದೆಃಗಂಡ | ಃ | ಜ್ಯೋತಿಬಾ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | : | ಪಿ.ಐ. ಲೋಕಾಯುಕ್ತ ಬಿದರ |
| ವಾಸಸ್ಥಳ | ಃ | ಬಿದರ |

ದಿನಾಂಕಃ 24.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ</u>**

ದಿಃ 15-12-2019 ರಿಂದ 24-09-2021 ರವರೆಗೆ ನಾನು ನರೋಣಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 05-07-2021 ರಂದು ಮ. 3.00 ಗಂಟೆಗೆ ಚಾಸಾ 1 ರವರು ನೀಡಿದ ದೂರಿನ ಸಾರಾಂಶದ ಮೇರೆಗೆ ಗುನ್ನಾ ಸಂಖ್ಯೆ 61/2021 ಅಂತಾ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ.ವರದಿಯನ್ನು ತಯಾರಿಸಿ ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 06-07-2021 ರಂದು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮತ್ತು ಚಾಸಾ 1 ರವರ ಸಮಕ್ಷಮ ಕೈಗೊಂಡು ಸ್ಥಳದಿಂದ ಒಂದು ಊರುಗೋಲನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 5 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 28-07-2021 ರಂದು ಆರೋಪಿಯನ್ನು ದಸ್ತಗೀರ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ದಿಃ 29-07-2021 ರಂದು ಚಾಸಾ 4 ರವರ ಕ್ಷ-ಕಿರಣ ವರದಿ ಪಡೆದುಕೊಂಡಿರುತ್ತೇನೆ. ದಿಃ 14-09-2021 ರಂದು ಚಾಸಾ 9 ರವರ ಮುಂದೆ ಚಾಸಾ 4 ರನ್ನು ಹಾಜರುಪಡಿಸಿ ಅವರ ಹೇಳಿಕೆಯನ್ನು ಪಡೆಯಲು ಪತ್ರವನ್ನು ನೀಡಿರುತ್ತೇನೆ ನಂತರ ದಿಃ 20-09-

2021 ರಂದು  ಚಾಸಾ 4 ರವರ ಹೇಳಿಕೆಯನ್ನು ಪಡೆದ ಬಗ್ಗೆ ಚಾಸಾ 9 ರವರ ಕಚೇರಿಯಿಂದ ವರದಿ ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಪ್ರ.ವ.ವ. ವರದಿಯಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ.ವ.ವ ವರದಿಯನ್ನು  ನಿಪಿ. 6 ಅಂತ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 6 ಎ ಎಂದು ಗುರುತಿಸಲಾಯಿತು.  ಸಾಕ್ಷಿಯು ನಿಪಿ-2 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2ಬಿ ಅಂತ ಗುರುತಿಸಲಾಯಿತು.  ಸಾಕ್ಷಿಯು ನಿಪಿ-1 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1(ಸಿ) ಅಂತ ಗುರುತಿಸಲಾಯಿತು.  ಸಾಕ್ಷಿಯು ನಿಪಿ-4 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 4(ಬಿ) ಅಂತ ಗುರುತಿಸಲಾಯಿತು.  ಸಾಕ್ಷಿಯು ನಿಪಿ-5 ರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5(ಬಿ) ಅಂತ ಗುರುತಿಸಲಾಯಿತು. ಸಾಕ್ಷಿಯು ದಿಃ 28-07-2021 ರ ದಾಖಲೆಯನ್ನು  ನೋಡಿ ಗುರುತಿಸಿದ್ದು, ಅದನ್ನು ನಿಪಿ 7 ಅಂತ ಗುರುತಿಸಲಾಯಿತು.  ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 7ಎ ಅಂತ ಗುರುತಿಸಲಾಯಿತು.  ಈಗಾಗಲೇ ಗುರುತಿಸಲಾದ ಮು.ಮಾ.1ನ್ನು  ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಅಂತಾ ನುಡಿಯುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ.  ಎಮ ವಿ ಇ  ವಕೀಲರಿಂದಃ</u>**

ನಾನು ಚಾಸಾ 1 ರವರಿಗೆ ಯಾವ ಕಾರಣಕ್ಕಾಗಿ ತಡವಾಗಿ ದೂರ ಸಲ್ಲಿಸಿದ್ದೀರಿ ಅಂತಾ ವಿಚಾರಣೆ ಮಾಡಿರುತ್ತೇನೆ. ನನಗೆ ನರೋಣಾ ಆಸ್ಪತ್ರೆಯಿಂದ ಎಮ ಎಲ್ ಸಿ ದಾಖಲಾಗಿರುವುದಿಲ್ಲ, ಆದರೆ ಚಾಸಾ 1 ರವರು ನೇರವಾಗಿ ಠಾಣೆಗೆ ಬಂದು ದೂರನ್ನು ದಾಖಲಿಸಿರುತ್ತಾರೆ.  ನರೋಣಾ ಪೋಲಿಸ್ ಠಾಣೆ ಮತ್ತು ನರೋಣಾ ಸರ್ಕಾರಿ ಆಸ್ಪತ್ರೆಗೆ ಒಂದು ಕಿ.ಮೀ ಅಂತರ ಇರುತ್ತದೆ.  ನಿಪಿ. 7 ರಲ್ಲಿ ಇರುವ ವೈದ್ಯರ ಹೆಸರು ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲಿ ಊರುಗೋಲಿನ ಉದ್ದವನ್ನು ಮಾತ್ರ ನಮೂದು ಮಾಡಿದ್ದು ಅದು ಎಷ್ಟು ದಪ್ಪ ಇತ್ತು ಅಂತಾ ನಮೂದು ಮಾಡಿರುವುದಿಲ್ಲ, ಸದರಿ ಊರುಗೋಲು ಕಪ್ಪು  ಬಣ್ಣದ್ದು ಇತ್ತು ಅಂತಾ ನುಡಿಯುತ್ತಾರೆ. ಸಾಮಾನ್ಯವಾಗಿ ಸದರಿ ಮು.ಮಾ. 1 ತರಹ ಊರುಗೋಲುಗಳು ಎಲ್ಲಾ ಕಡೆಗೆ ಸಿಗುತ್ತವೆ ಎಂದರೆ ಸಾಕ್ಷಿಯು ಅದು ನನಗೆ ಘಟನಾ ಸ್ಥಳದಲ್ಲಿ

ಸಿಕಿರುತ್ತದೆ ಅಂತಾ ನುಡಿಯುತ್ತಾರೆ. ನಾನು ಸಾಕ್ಷಿದಾರರ ಹೇಳಿಕೆಯನ್ನು ಘಟನಾ ಸ್ಥಳದಲ್ಲಿ ತೆಗೆದುಕೊಂಡಿರುತ್ತೇನೆ. ಚಾಸಾ 5 ರವರ ಹೇಳಿಕೆ ಪಡೆದ ಸಮಯ ಎಷ್ಟು ಆಗಿತ್ತು ಅಂತಾ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಟೋ ಮತ್ತು ವಿಡಿಯೋ ಮಾಡಿರುವುದಿಲ್ಲ. ನಾನು ಚಾಸಾ 9 ರವರ ಶಾಲೆಗೆ ಸಲ್ಲಿಸಿದ ಮನವಿ ಪತ್ರವನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುವುದಿಲ್ಲ. ಚಾಸಾ 9 ರವ ರು ಚಾಸಾ 4 ರವರ ಹೇಳಿಕೆಯನ್ನು ಪಡೆಯುವಾಗ ವಿಡಿಯೋಗ್ರಾಫಿ ಮಾಡಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಚಾಸಾ 1 ರವರಿಗೆ ಮತ್ತು ಆರೋಪಿಗೆ ಏನಾದರು ವೈಮನಸ್ಸು ಇತ್ತು ಅಂತಾ ಕಂಡು ಬಂದಿಲ್ಲ. ಮೂಕು ಮತ್ತು ಕಿವುಡ ವ್ಯಕ್ತಿ ಭಾಷೆಯು ಕೇವಲ ತಜ್ಞರಿಗೆ ಮಾತ್ರ ಅರ್ಥ ಆಗುತ್ತದೆ ಎಂದರೆ ಸರಿ. ಸದರಿ ತಜ್ಞರಿಗೆ ಸದರಿ ವಿಷಯದ ಬಗ್ಗೆ ಪದವಿ ಪಡೆದ ಬಗ್ಗೆ ಪ್ರಮಾಣ ಪತ್ರ ಇರುತ್ತದೆ ಎಂದರೆ ಸರಿ. ನಾನು ಸದರಿ ಅವರಿಂದ ಅವರ ಪದವಿಯ ಬಗ್ಗೆ ದಾಖಲೆ ಪಡೆದಿರುವುದಿಲ್ಲ. ಚಾಸಾ 1 ರವರು ಮೂಕ ಮತ್ತು ಕಿವುಡ ವ್ಯಕ್ತಿಯ ಭಾಷೆಯನ್ನು ಅರ್ಥ ಮಾಡಿಕೊಳ್ಳುವ ತಜ್ಞರು ಅಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ಪ್ರಕರಣದಿಂದ ಹಲ್ಲೆಯಾದರೆ ಅವರು ಆಸ್ಪತ್ರೆಗೆ ಬಂದಾಗ ವೈದ್ಯರು ಎಮ ಎಲ್ ಸಿ ದಾಖಲಿಸಿ ಪೋಲಿಸರಿಗೆ ವಿಷಯ ತಿಳಿಸುತ್ತಾರೆ ಎಂದರೆ ಸರಿ. ಚಾಸಾ 9 ರವರು ಚಾಸಾ 4 ರವರ ಸಹಿಯನ್ನು ನಿಪಿ. 5 ರ ಮೇಲೆ ತೆಗೆದುಕೊಂಡಿಲ್ಲ ಎಂದರೆ ಸರಿ. ನಿಪಿ. 7 ರಲ್ಲಿ ನಮೂದಿಸಿದ ಚಿಕಿತ್ಸೆಯನ್ನು ಯಾವ ವೈದ್ಯರು ನೀಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ನಿಪಿ. 7 ರಲ್ಲಿ ನಮೂದಿಸಿದ ಚಿಕಿತ್ಸೆಯ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ. ಯಾವ ವೈದ್ಯರು ಚಿಕಿತ್ಸೆ ನೀಡಿರುತ್ತಾರೋ ಅವರೆ ಗಾಯದ ಪ್ರಮಾಣ ಪತ್ರವನ್ನು ನೀಡಬೇಕು ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ಚಾಸಾ 1 ರವರು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಅಂತಾ ತಿಳಿದು ಬಂದಿತ್ತು ಎಂದರೆ ಸರಿಯಲ್ಲ,

ದಿಃ 15-12-2019 ರಿಂದ 24-09-2021 ರವರೆಗೆ ನಾನು ನರೋಣಾ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ದಿಃ 05-07-2021 ರಂದು ಮ. 3.00 ಗಂಟೆಗೆ ಚಾಸಾ 1 ರವರು ನೀಡಿದ ದೂರಿನ ಸಾರಾಂಶದ ಮೇರೆಗೆ ಗುನ್ನಾ ಸಂಖ್ಯೆ 61/2021 ಅಂತಾ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವ.ವರದಿಯನ್ನು ತಯಾರಿಸಿ ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 06-07-2021 ರಂದು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮತ್ತು ಚಾಸಾ 1 ರವರ ಸಮಕ್ಷಮ ಕೈಗೊಂಡು ಸ್ಥಳದಿಂದ ಒಂದು ಊರುಗೋಲನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 5 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 28-07-2021 ರಂದು ಆರೋಪಿಯನ್ನು ದಸ್ತಗೀರ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತೇನೆ. ದಿಃ 29-07-2021 ರಂದು ಚಾಸಾ 4 ರವರ ಕ್ಷ-ಕಿರಣ ವರದಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 14-09-2021 ರಂದು ಚಾಸಾ 9 ರವರ ಮುಂದೆ ಚಾಸಾ 4 ರನ್ನು ಹಾಜರುಪಡಿಸಿ ಅವರ ಹೇಳಿಕೆಯನ್ನು ಪಡೆಯಲು ಪತ್ರವನ್ನು ನೀಡಿರುತ್ತೇನೆ ನಂತರ ದಿಃ 20-09-2021 ರಂದು ಚಾಸಾ 4 ರವರ ಹೇಳಿಕೆಯನ್ನು ಪಡೆದ ಬಗ್ಗೆ ಚಾಸಾ 9 ರವರ ಕಚೇರಿಯಿಂದ ವರದಿ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ